ಕರ್ನಾಟಕ ಸರ್ಕಾರ

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.**

ಸಂಖ್ಯೆ: ಪಪೂಶಿ/ಸೈಶಾ-04/ಇತರೆ-20/ಎ/2014-15 ದಿನಾಂಕ: 5.02.2015.

ಸುತ್ತೋಲೆ

ವಿಷಯ: ವಿದ್ಯಾರ್ಥಿಗಳ ದಾಖಲಾತಿಯ ಸಂಧರ್ಭದಲ್ಲಿ ದಾಖಲಾತಿ/ಪ್ರಮಾಣ ಪತ್ರಗಳಲ್ಲಿ ಹೆಸರು, ಜಾತಿ ಜನ್ಮದಿನಾಂಕ ಮತ್ತು ಪೋಷಕರ ಹೆಸರಿನಲ್ಲಿ ತಿದ್ದುಪಡಿಯನ್ನು ಜಿಲ್ಲಾ ಹಂತದಲ್ಲಿಯೆ ಮಾಡುವ ಕುರಿತು.

ಉಲ್ಲೇಖ: ಸರ್ಕಾರದ ಜಂಟಿ ಕಾರ್ಯದರ್ಶಿ(ಆಡಳಿತ) (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ: ಇಡಿ 19 ಪಿಡಿಬಿ 2014, ದಿನಾಂಕ: 28.11.2014.

**********

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ರಾಜ್ಯದ ಪದವಿ ಪೂರ್ವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳನ್ನು ಕಾಲೇಜಿಗೆ ದಾಖಲಾತಿ ಮಾಡುವ ಸಂದರ್ಭದಲ್ಲಿ ದಾಖಲಾತಿ/ ಪ್ರಮಾಣ ಪತ್ರಗಳಲ್ಲಿ ಹೆಸರು, ಜನ್ಮ ದಿನಾಂಕ, ಜಾತಿ ಮತ್ತು ಪೋಷಕರ ಹೆಸರಿನಲ್ಲಿ ತಿದ್ದುಪಡಿಯನ್ನು ಜಿಲ್ಲಾ ಹಂತದಲ್ಲಿ ನಿಗಧಿತ ಅವಧಿಯಲ್ಲಿ ಪರಿಹರಿಸುವಂತೆ ರಾಜ್ಯದ ವಿಧಾನಸಭೆ ಅರ್ಜಿ ಸಮಿತಿ ದಿನಾಂಕ 06.11.2014ರಂದು ನಡೆದ ಸಭೆಯಲ್ಲಿ ಈ ಕುರಿತು ಕೆಳಕಂಡ ಅಂಶಗಳ ಬಗ್ಗೆ ಒಂದು ವಾರದೊಳಗೆ ವರದಿಯನ್ನು ನೀಡುವಂತೆ ಕೋರಿರುತ್ತಾರೆ ಹಾಗೂ ಇದರ ಬಗ್ಗೆ ಮುಂದಿನ ವಿಧಾನ ಸಭೆಯ ಅರ್ಜಿಯ ಸಮಿತಿಯಲ್ಲಿ ಸಭೆ ಸೇರಿ ವಿಷಯದ ಬಗ್ಗೆ ಚರ್ಚಿಸಲಾಗುವುದು ಎಂದು ತಿಳಿಸಿರುತ್ತಾರೆ.

ಸದರಿ ವಿಷಯಗಳು ಈ ಕೆಳಕಂಡಂತೆ ಇರುತ್ತದೆ.

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಸುತ್ತೋಲೆ ಸಂಖ್ಯೆ ಆ5(1)/ಅ (8)ಶಾಶಿಹೆಜಾತಿ-23/89-90 ದಿನಾಂಕ 02.05.2000, ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 32 ಡಿಟಿಬಿ 2008, ದಿನಾಂಕ 20.08.2009 ರಗಳನ್ವಯ ರಾಜ್ಯದಲ್ಲಿ ಈ ರೀತಿ ದಾಖಲಾತಿಗಳಲ್ಲಿ ತಿದ್ದುಪಡಿ ಅಥವಾ ಬದಲಾವಣೆ ಕೋರಿ ಒಟ್ಟು ಎಷ್ಟು ಅರ್ಜಿಗಳು ಈವರೆಗೆ ಸ್ವೀಕೃತವಾಗಿದೆ, ಅವುಗಳ ಪೈಕಿ ಎಷ್ಟು ವಿಲೇವಾರಿಯಾಗಿದೆ ಹಾಗೂ ಎಷ್ಟು ಬಾಕಿ ಇವೆಯೆಂಬ ಬಗ್ಗೆ ಜಿಲ್ಲಾವಾರು ಮಾಹಿತಿಯನ್ನು ನೀಡಲು ಕೋರಿರುತ್ತಾರೆ.
2. ಸುತ್ತೋಲೆಗಳನ್ವಯ ಸಣ್ಣಪುಟ್ಟ ತಿದ್ದುಪಡಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಮುಖ್ಯೋಪಾಧ್ಯಾಯರ ಹಂತದಲ್ಲಿಯೇ ಮಾಡಲು ಅವಕಾಶವಿರುವುದರಿಂದ ಈ ರೀತಿಯಲ್ಲಿ ರಾಜ್ಯದಲ್ಲಿ ತಿದ್ದುಪಡಿಯಾಗಿರುವ ಪ್ರಕರಣಗಳು ಹಾಗೂ ಕೋರ್ಟ್ ಮುಖಾಂತರ ಡಿಕ್ರಿ ಪಡೆದಿದ್ದು, ಇನ್ನು ತಿದ್ದುಪಡಿಯಾಗಬೇಕಾಗಿರುವ ಪ್ರಕರಣಗಳ ಕುರಿತು ಮಾಹಿತಿ ನೀಡುವಂತೆ ಕೋರಿರುತ್ತಾರೆ.
3. ಜಿಲ್ಲಾ ವಾರ್ತಾಧಿಕಾರಿಗಳ ಸಹಯೋಗದಲ್ಲಿ ಜಾತಿ ತಿದ್ದುಪಡಿ ಮಾಡುವ ವಿಧಾನದ ಬಗ್ಗೆ ಜಾಹೀರಾತನ್ನು ಸ್ಥಳೀಯ ದಿನಪತ್ರಿಕೆಗಳಲ್ಲಿ ಜಿಲ್ಲಾ ಉಪನಿರ್ದೇಶಕರು ನೀಡುವ ಬಗ್ಗೆ.
4. ಕೆಲವೊಂದು ಜಿಲ್ಲೆಗಳಲ್ಲಿ ಜಾತಿ ತಿದ್ದುಪಡಿಯಾಗಿರುವ ಬಹಳಷ್ಟು ಪ್ರಕರಣಗಳಿಗೆ ಶಾಲಾ ಹಂತದಲ್ಲೇ ಯಾವುದೇ ದಾಖಲಾತಿಗಳಿಲ್ಲದೆ ರೌಂಡ್‌ಅಫ್ ಮಾಡಿ ಜಾತಿ ಬದಲಾವಣೆ ಮಾಡಿರುತ್ತಾರೆ, ಬೀದರ್ ಜಿಲ್ಲೆಯಲ್ಲಿ ಇಂತಹ ಬಹಳಷ್ಟು ಪ್ರಕರಣಗಳಿವೆಯೆಂದು ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಪ್ರತಾಪ್‌ಗೌಡ ಪಾಟೀಲ್ ಇವರು ಸಭೆಯಲ್ಲಿ ಪ್ರಸ್ತಾಪಿಸಿರುವುದನ್ನು ಕುರಿತು ಪರಿಶೀಲಿಸಿ ಸ್ಪಷ್ಟ ವರದಿಯನ್ನು ನೀಡುವಂತೆ ಕೋರಿರುತ್ತಾರೆ.
5. ಯಾವುದೇ ದಾಖಲಾತಿಗಳಿಲ್ಲದೆ ಜಾತಿ ಬದಲಾವಣೆ ಮಾಡಿರುವ ಪ್ರಕರಣಗಳಿದ್ದರೆ, ಅವುಗಳ ಬಗ್ಗೆ ಜಿಲ್ಲಾ ಮಟ್ಟದಿಂದ ಮಾಹಿತಿಯನ್ನು ನೀಡಲು ಕೋರಿರುತ್ತಾರೆ. (ಪ್ರತಿಯನ್ನು ಮಾಹಿತಿಗಾಗಿ ಇದರೊಂದಿಗೆ ಲಗತ್ತಿಸಿದೆ).

ಸದರಿ ವಿಷಯಗಳನ್ನು ಕುರಿತು ತಮ್ಮ ಜಿಲ್ಲಾ ವ್ಯಾಪ್ತಿಗೆ ಸಂಬಂಧಿಸಿದ ಪ್ರಕರಣಗಳಿದ್ದರೆ ಕೂಡಲೇ ಕ್ರಮಕೈಗೊಂಡು ಅದರ ಬಗ್ಗೆ ಮಾಹಿತಿಯನ್ನು ಸಂಬಂಧಿಸಿದ ಇಲಾಖೆಗೆ ಸಲ್ಲಿಸಲು ಸೂಚಿಸಿದೆ.

ಜಂಟಿ ನಿರ್ದೇಶಕರು(ಶೈಕ್ಷಣಿಕ),
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿ

1. ರಾಜ್ಯದ ಜಿಲ್ಲಾ ಉಪನಿರ್ದೇಶಕರುಗಳಿಗೆ. ಪದವಿ ಪೂರ್ವ ಶಿಕ್ಷಣ ಇಲಾಖೆ- ಮುಂದಿನ ಕ್ರಮಕ್ಕಾಗಿ.
2. ಇ-ಆಡಳಿತ ಶಾಖೆ ಪದವಿ ಪೂರ್ವ ಶಿಕ್ಷಣ ಇಲಾಖೆ, ವೆಬ್‌ಸೈಟ್‌ನಲ್ಲಿ ಅಳವಡಿಸಲು ಮುಂದಿನ ಕ್ರಮಕ್ಕಾಗಿ.
3. ಕಛೇರಿ ಪ್ರತಿ